**ಶ್ರೀ ವಿ.ಶ್ರೀನಿವಾಸ ಪ್ರಸಾದ್:** ಮಾನ್ಯ ಸಭಾಧ್ಯಕ್ಷರೆ, ನಾನು ಒಂದು ನಿಮಿಷ ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಿನ್ನೆಯ ದಿನ ತುಮಕೂರು ಜಿಲ್ಲೆಯಲ್ಲಿ ದಲಿತ ಮಹಿಳೆಯನ್ನು ಬಹಳ ಅಮಾನುಷವಾಗಿ ಮಾಡಿದ ಬರ್ಬರ ಕೊಲೆಯ ಬಗ್ಗೆ ಇವತ್ತು Home Minister ರವರು statement ಮಾಡಬೇಕಾಗಿತ್ತು. ನಿನ್ನೆಯ ದಿನ ಈ ಸದನದಲ್ಲಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಇದ್ದರು. ಇವತ್ತು ಅದರ ಬಗ್ಗೆ ಹೇಳಿಕೆಯನ್ನು ಮಾಡುತ್ತೇನೆಂದು ಹೇಳಿದರು. ಅದರ ಬಗ್ಗೆ ತಾವು ತಕ್ಷಣ ಹೇಳಿಕೆಯನ್ನು ಮಾಡಿಸಬೇಕು.

**ಅಧ್ಯಕ್ಷರು:** ಆಯಿತು.

**4. ಗಮನ ಸೆಳೆಯುವ ಸೂಚನೆ:**

**ವಿಷಯ: ಬಾಗೇಪಲ್ಲಿ ಪುರಸಭೆಯಲ್ಲಿ 2007–08 ಮತ್ತು 2008–09ರಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ಮಾಡಿರುವ ಬಗ್ಗೆ.**

**ಶ್ರೀ ಎನ್.ಸಂಪಂಗಿರು(ಬಾಗೇಪಲ್ಲಿ):** ಮಾನ್ಯ ಅಧ್ಯಕ್ಷರೆ, ಬಾಗೇಪಲ್ಲಿ ಪುರಸಭೆಯಲ್ಲಿ ಹಿಂದಿನ ಮುಖ್ಯಾಧಿಕಾರಿಗಳು 2007–08 ಮತ್ತು 2008–09ರಲ್ಲಿ ಕೋಟ್ಯಾಂತರ ರೂಗಳ ಅವ್ಯವಹಾರ ಮಾಡಿರುವ ಬಗ್ಗೆ ಜಿಲ್ಲಾಧಿಕಾರಿಗಳು ತನಿಖೆ ನಡಿಸಿದ್ದರು, ಈವರೆಗೆ ಯಾವುದೇ ಕ್ರಮ ಜರುಗಿಸದಿರುವ ಬಗ್ಗೆ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರ ಗಮನವನ್ನು ಸೆಳೆಯುತ್ತೇನೆ.

**ಶ್ರೀ ಬಾಲಚಂದ್ರ ಜಾರಕಿಹೊಳಿ(ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು):** ಮಾನ್ಯ ಅಧ್ಯಕ್ಷರೆ, ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ಪುರಸಭೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದ್ದು, ಈ ಹಿಂದೆ ಬಾಗೇಪಲ್ಲಿ ಪುರಸಭೆಯಲ್ಲಿ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಜಿ. ವೆಂಕಟೇಶ್ ಇವರ ಅವಧಿಯಲ್ಲಿ ಪುರಸಭೆಯ ಲೆಕ್ಕ ಪತ್ರಗಳು ಮತ್ತು ನಗದು ಪುಸ್ತಕಗಳನ್ನು ಸರಿಯಾಗಿ ನಿರ್ವಹಿಸಿರುವುದಿಲ್ಲ ಮತ್ತು ವಿವಿಧ ಯೋಜನೆಗಳ ಅನುದಾನಗಳನ್ನು ವಿಲೀನ ಮಾಡಿಕೊಂಡಂತೆ ಚಿಕ್ಕುಗಳನ್ನು ಬರೆದಿರುವುದು ಕಂಡು ಬಂದಿದ್ದು, ಸದರಿ ಪುರಸಭೆಯಲ್ಲಿ ವಾರ್ಡು ವ್ಯಾಪ್ತಿಯ ಕಾಮಗಾರಿಗೆ ಕೌನ್ಸಿಲ್ ಅನುಮತಿ ಪಡೆದಿರುವುದಿಲ್ಲ. ಆದರೆ ಅಧ್ಯಕ್ಷರ ಹಾಗೂ ಸ್ಥಾಯಿ ಸಮಿತಿ ಅಧ್ಯಕ್ಷರ ಅನುಮೋದನೆ ಪಡೆಯಲಾಗಿದೆ. ತುಂಡು

ಕಾಮಗಾರಿಗಳಿಗಾಗಿ ಅಂದಾಜು ಪಟ್ಟಿಯನ್ನು ಮುಖ್ಯಾಧಿಕಾರಿಗಳು ಒಪ್ಪಿ ಗುತ್ತಿಗೆಯನ್ನು ನೀಡಿರುತ್ತಾರೆ. ಪುರಸಭೆ ನಿಧಿಯ ಬದಲಾಗಿ ಎಸ್.ಎಫ್.ಸಿ ಹಣ ಅಜಾಗರೂಕತೆಯಿಂದ ಖರ್ಚುಮಾಡಿರುವುದು, ನಗದು ಪುಸ್ತಕವನ್ನು ಸರಿಯಾಗಿ ನಿರ್ವಹಿಸದೇ ಇರುವುದು ಮಧ್ಯಂತರ ತನಿಖೆಯಿಂದ ಕಂಡುಬಂದಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿ ಮತ್ತು ನೌಕರರಿಗೆ ನೋಟೀಸನ್ನು ಜಾರಿಮಾಡಿ, ವಿವರಣೆ ಪಡೆಯಲಾಗಿರುತ್ತದೆ. ಹಾಗೂ ಈ ಪ್ರಕರಣದ ಬಗ್ಗೆ ಚಿಕ್ಕಬಳ್ಳಾಪುರ ಜಿಲ್ಲಾ ನಗರಾಭಿವೃದ್ಧಿ ಕೋಶದ ಕಾರ್ಯಪಾಲಕ ಅಭಿಯಂತರರು ಮತ್ತು ಹಾಲಿ ಮುಖ್ಯಾಧಿಕಾರಿಗಳು, ಪುರಸಭೆ, ಬಾಗೇಪಲ್ಲಿ ತನಿಖೆ ನಡೆಸುವಂತೆ ಜಿಲ್ಲಾಧಿಕಾರಿಗಳು ಈಗಾಗಲೇ ನಿರ್ದೇಶನ ನೀಡಿರುತ್ತಾರೆ.

ಬಾಗೇಪಲ್ಲಿ ಪುರಸಭೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ, ಹಿಂದಿನ ಮುಖ್ಯಾಧಿಕಾರಿಗಳಾದ ಶ್ರೀ ಜಿ. ವೆಂಕಟೇಶ್ ಇವರ ಅವಧಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಬಗ್ಗೆ ಸಮಗ್ರ ತನಿಖೆ ನಡೆಸಿ, ವರದಿ ಸಲ್ಲಿಸುವಂತೆ ಸರ್ಕಾರವು ಪೌರಾಡಳಿತ ನಿರ್ದೇಶನಾಲಯದ ಆಯುಕ್ತರಿಗೆ ನಿರ್ದೇಶನ ನೀಡಲಾಗಿದೆ. ವರದಿ ಬಂದ ನಂತರ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

**12.40 ಪಿ ಎಂ**

**ಶ್ರೀ ಎನ್ ಸಂಪಂಗಿ:** ಅಲ್ಲಿ ಏನಾಗಿದೆಯೆಂದರೆ, ಅವರು ಯಾರಿಗೂ ಕೇಳದೆ ವಿಶೇಷ ಗ್ರಾಂಟ್‌ನ್ನು ಅವರಿಷ್ಟ ಅವರೇ ತುಂಡು ಗುತ್ತಿಗೆಯನ್ನು ಕೊಟ್ಟು ಎಲ್ಲಾ ಅವ್ಯವಹಾರಗಳು ನಡೆದು ಹೋಗಿದೆ. ಅವರನ್ನು ಈಗ ದೇವನಹಳ್ಳಿಗೆ ತೆಗೆದುಕೊಂಡು ಹೋಗಿ ಹಾಕಿದ್ದಾರೆ. ಆದಷ್ಟು ಬೇಗ ತನಿಖೆ ಮಾಡಿ ವರದಿ ತೆಗೆದುಕೊಂಡು ಆ ಮುಖ್ಯಾಧಿಕಾರಗಳೇನಿದ್ದಾರೆ ಅವರನ್ನು ಸರ್ಕಾರದ ಸೇವೆಯಿಂದ ವಜಾ ಮಾಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

**ಶ್ರೀ ಬಾಲಚಂದ್ರ ಜಾರಕಿಹೊಳಿ:** ಮಾನ್ಯ ಶಾಸಕರು ಹೇಳಿದಂತೆ ಒಂದು ತಿಂಗಳಿನಲ್ಲಿ ಅದರ ಬಗ್ಗೆ ವರದಿಯನ್ನು ತರಿಸಿಕೊಂಡು ಆರೋಪವೇನಾದರು ಸಾಭೀತಾದರೆ ಖಂಡಿತ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ.

**ಶ್ರೀ ಎನ್ ಸಂಪಂಗಿ:** ಇದು ಆಗಿ ಎರಡು ವರ್ಷಗಳಾಗಿವೆ. ಆದರೂ ಇದುವರೆಗೆ ಯಾವುದೇ ತನಿಖೆ ಮಾಡಿಲ್ಲ. ಇವರು ವಿಶೇಷ ಅನುದಾನವನ್ನು

ನಮಗೆ ಕೊಡುತ್ತಾರೆ. ಈ ರೀತಿ ಒಂದು, ಎರಡು ಕೋಟಿ ಅವ್ಯವಹಾರವಾದರೆ ಹೇಗೆ? ತಕ್ಷಣ ಕ್ರಮ ಕೈಗೊಳ್ಳಬೇಕು.

**ಅಧ್ಯಕ್ಷರು:** ಒಂದು ತಿಂಗಳು ಎಂದು ಹೇಳೀದ್ದಾರೆ.

**ಶ್ರೀ ಎನ್ ಸಂಪಂಗಿ:** ಆಯಿತು

**ಶ್ರೀ ಡಿ ಕೆ ಶಿವಕುಮಾರ್:** ಮಾನ್ಯ ಅಧ್ಯಕ್ಷರೆ, ಕನಕಪುರ ಟೌನ್‌ನಲ್ಲಿನ ಜನರು ಕಲುಷಿತ ಕುಡಿಯುವ ನೀರಿನಿಂದ ತೊಂದರೆಯಾಗಿದ್ದು ಇದರ ಬಗ್ಗೆ ನಾನು ಅರ್ಬನ್ ಡೆವಲಪ್‌ಮೆಂಟ್ ಸಚಿವರಲ್ಲಿ ಕೇಳಿದ್ದೇ. ಆದರೆ, ಪೌರಾಡಳಿತ ಸ್ಥಳೀಯ ಸಂಸ್ಥೆಗಳ ಸಚಿವರಿಗೆ ಹೋಗಿದೆ. ಕನಕಪುರಕ್ಕೆ ಕುಡಿಯುವ ನೀರನ್ನು ಒದಗಿಸುವುದು ಅವರ ಕೈಯೆಲ್ಲೇನು ಇಲ್ಲ. ಆದ್ದರಿಂದ ಇದನ್ನು ಯು.ಡಿ. ಸಚಿವರಿಗೆ ಕೊಡಬೇಕು ಇಲ್ಲದಿದ್ದರೆ ಬಿಡಬ್ಲ್ಯೂಎಸ್‌ಎಸ್ ಸಚಿವರಿಗೆ ಕೊಡಬೇಕು. ಸರ್ಕಾರದ ಪರವಾಗಿ ಅವರು ಏನು ಉತ್ತರ ಕೊಡುತ್ತಾರೊ ಅದನ್ನು ಕೇಳಲು ನಾನು ತಯಾರಿದ್ದೇನೆ. ಇಲ್ಲದಿದ್ದರೆ ಅದನ್ನು ದಯವಿಟ್ಟು ಯು.ಡಿ. ಸಚಿವರಿಗೆ ವರ್ಗಾವಣೆ ಮಾಡಿಕೊಡಿ. ನಾನು Quality of water ಬಗ್ಗೆ ಚರ್ಚೆ ಮಾಡುತ್ತಿದ್ದೇನೆ.

**ಅಧ್ಯಕ್ಷರು:** ಆಗಬಹುದು.

**ಶ್ರೀ ಎಸ್ ಸುರೇಶ್‌ಕುಮಾರ್ (ನಗರಾಭಿವೃದ್ಧಿ ಸಚಿವರು):** ನಾನು ಕೊಡುತ್ತೇನೆ. ಈಗ ಮಾಡುತ್ತೇನೆ.

**ಶ್ರೀ ಡಿ ಕೆ ಶಿವಕುಮಾರ್:** ಈಗ ಮಾಡಲು ಆಗುತ್ತದೆಯೇ? Let it be transfer. ಅದನ್ನು ಯು.ಡಿ. ಅಥವಾ BWSS ಗೆ ವರ್ಗಾವಣೆ ಮಾಡಿಬಿಡಿ ಸ್ವಾಮಿ.

**ಅಧ್ಯಕ್ಷರು:** ಆಗಬಹುದು. ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 12 ಗಂಟೆ 43 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ: 5ನೇ ಜುಲೈ ಮಾಹೆ 2010ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಃಶ್ಚಯಿಸಿತು)**

**5. ಅನುಬಂಧ – ಅ:**

**ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಯೋಜನೆಗಳು**